₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಮಂಗಳವಾರ 16.04.2024 ಸಂಪುಟ: 09 ಸಂಚಿಕೆ: 112 ಪುಟಗಳು: 14 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

# ವಿಶ್ವವಾಣಿ

ವಿಶ್ವಾಸವೇ ವಿಶ್ವ



## ಇತಿಹಾಸ ನಿರ್ಮಿಸಿದ ಹೈದ್ರಾಬಾದ್

- ಐಪಿಎಲ್‌ನಲ್ಲಿ ಅತ್ಯಧಿಕ ಮೊತ್ತ ದಾಖಲೆ
- ಆರ್‌ಸಿಬಿ ವಿರುದ್ಧ 3 ವಿಕೆಟ್‌ಗೆ 287 ರನ್
- ತನ್ನದೇ ದಾಖಲೆ 277 ಮುರಿದ ಎಸ್‌ಆರ್‌ಎಚ್
- ಟ್ರಾವಿಸ್ ಹೆಡ್ ದಾಖಲೆಯ ಶತಕ 102(41)
- ಆರ್‌ಸಿಬಿಗೆ ವಿರೋಚಿತ ಸೋಲು






## ಪುಟ ತೆರೆದಂತೆ...



ಹಲ್ಲಿಲ್ಲದ ಹಾವಿಗೆ ಬೇಕಿದೆ ಬಲ
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ಸಂ.ಪುಟ | 6

ಇನ್ನಷ್ಟು ಬೇಕೆನ್ನ ಹೃದಯಕ್ಕೆ ರಾಮ
ರಾಮರಥ
ಜಯಶ್ರೀ ಕಾಲ್ಕುಂದ್ರಿ

ಸಂ.ಗಮ | 7


## ಭಾರತ ಮತ ಮಹಾ ಸಮರ

- ಸ್ಟಾರ್ ಚಂದ್ರು ಅಬ್ಬರದ ಪ್ರಚಾರ
- ಶ್ರೀಗಳು ಸ್ಪರ್ಧಿಸುವ ದುಸ್ಸಾಹಸ ಬೇಡ
- ರಾಜಕೀಯಕ್ಕೆ ಸಾಫ್ಟ್ ಆಗಿರಬೇಕು
- ಲೋಕ ಅಖಾಡದಲ್ಲಿ ಕೋಟಿ ಕುಳಗಳು
- ಎದೆನೋವು: ಚಿಕಿತ್ಸೆ ಪಡೆದ ಜಮೀರ್
- ಯತ್ನಾಳಗೆ ತಾಕತ್ತಿದ್ದರೆ ಈಗಲೇ ಸ್ಪರ್ಧೆಗೆ ಬರಲಿ
- ರಾಜ್ಯಕ್ಕೆ ಮೋದಿ ಕೊಡುಗೆ ಕುರಿತು ಚರ್ಚೆಯಾಗಲಿ
- ಸಾಂವಿಧಾನಿಕ ಸಂಸ್ಥೆಗಳು ಪ್ರಧಾನಿ ಸ್ವತ್ತಲ್ಲ: ರಾಹುಲ್ ಗಾಂಧಿ
- ಮೊದಲ ಹಂತದ ಚುನಾವಣೆಗೆ ಮೂರು ದಿನ ಮಾತ್ರ ಬಾಕಿ

## ಮಾತಂದ್ರೆ ಮಾತು



ಬಿಜೆಪಿ ಬಿಡುಗಡೆ ಮಾಡಿರುವ ಪ್ರಣಾಳಿಕೆಯಲ್ಲಿ ಪ್ರಧಾನಿ ಮೋದಿ ಅವರ ಪಿಕ್‌ನಿಕ್‌ನ ವಿಭಿನ್ನ ಫೋಟೋಗಳು ಬಿಟ್ಟರೆ ಯುವಕರಿಗೆ, ಮಹಿಳೆಯರಿಗೆ, ರೈತರಿಗೆ, ಬಡವರಿಗೆ, ಶ್ರಮಿಕರಿಗೆ, ನಿರ್ಗತಿಕರಿಗೆ ಉಪಯೋಗವಾಗುವಂಥ ಯಾವುದೇ ಅಂಶಗಳಿಲ್ಲ. ಈ ಹಿಂದಿನ ಹತ್ತು ವರ್ಷಗಳ ಗ್ಯಾರಂಟಿಗಳು ಯಾರ ಗ್ಯಾರಂಟಿಗಳಾಗಿದ್ದವು? ಅವರದೇ ಗ್ಯಾರಂಟಿಗಳಾದ ಅಚ್ಛೇ ದಿನ್, ಸ್ಕಿಲ್ ಇಂಡಿಯಾ, ಮೇಕ್ ಇನ್ ಇಂಡಿಯಾ, 100 ಸ್ಮಾರ್ಟ್ ಸಿಟಿಗಳು, 2 ಕೋಟಿ ಉದ್ಯೋಗ ಸೃಷ್ಟಿಯ ಗ್ಯಾರಂಟಿಗಳು ಏನಾದವು? ಯಾವ ಗ್ಯಾರಂಟಿಗಳು ಅನುಷ್ಠಾನಗೊಂಡಿವೆ?

**ಪ್ರಿಯಾಂಕ್ ಖರ್ಗೆ**, ಸಚಿವ

## ದಾರಿದೀಪೋಕ್ತಿ

ತಪ್ಪು ಮಾಡುವುದು ಯಶಸ್ಸಿನ ಮೊದಲ ಹೆಜ್ಜೆ ಎಂದು ಕೆಲವರು ಭಾವಿಸುತ್ತಾರೆ. ಆದರೆ ನಿಜವಾದ ಯಶಸ್ಸು ಯಾವುದೆಂದರೆ, ಮಾಡಿದ ತಪ್ಪನ್ನು ತಿದ್ದಿಕೊಳ್ಳುವುದು ಮತ್ತು ಅದರಿಂದ ಪಾಠ ಕಲಿಯುವುದು.


## ವಕ್ರತುಂಡೋಕ್ತಿ

ಮನುಷ್ಯನಿಗೆ ಎಷ್ಟು ನಿದ್ದೆ ಬೇಕು ಅಂತ ಕೇಳಿದರೆ, ಸರಾಸರಿ ನಿದ್ದೆ ಮಾಡುವುದಕ್ಕಿಂತ ಹತ್ತು ನಿಮಿಷ ಜಾಸ್ತಿ ಎಂದು ಹೇಳಬಹುದು.

## ಫನ್‌ತರಂಗ

- ರಘುಪತಿ ಶೃಂಗೇರಿ -

ಆರ್‌ಸಿಬಿಗೆ ತಲೆನೋವಾದ ಟ್ರಾವಿಸ್ ಹೆಡ್ ವೇಗದ ಶತಕ




### ಡಿಸಿಎಂ ಡಿಕೆಶಿ, ಮಾಜಿ ಸಿಎಂ ಎಚ್‌ಡಿಕೆ ಪರಸ್ಪರ ಆರೋಪ-ಪ್ರತ್ಯಾರೋಪ | ಏಕವಚನದಲ್ಲಿ ಬೈದಾಡಿಕೊಂಡ ನಾಯಕರು

# ಮಾಜಿ ಜೋಡೆತ್ತುಗಳ ಜೋರು ವಾಕ್ಸಮರ

**ಬೆಂಗಳೂರು:** 'ಗ್ಯಾರಂಟಿ ಯೋಜನೆಗಳಿಂದ ಮಹಿಳೆಯರು ದಾರಿ ತಪ್ಪುತ್ತಿದ್ದಾರೆ' ಎನ್ನುವ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಹೇಳಿಕೆಯಿಂದ ಉದ್ಭವವಾಗಿರುವ ವಿವಾದ ಮತ್ತೊಂದು ಹಂತ ತಲುಪಿದ್ದು, ಕಳೆದ ಲೋಕಸಭಾ ಚುನಾವಣೆಯಲ್ಲಿ ಜೋಡೆತ್ತುಗಳಾಗಿದ್ದ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪರಸ್ಪರ ವಾಕ್ಸಮರ ನಡೆಸಿದ್ದಾರೆ. ಇಬ್ಬರು ನಾಯಕರು ಒಬ್ಬರನ್ನೊಬ್ಬರು ಏಕವಚನದಲ್ಲಿ ಬೈದಾಡಿಕೊಂಡು ಟೀಕಾಪ್ರಹಾರ ನಡೆಸಿದ್ದಾರೆ.



### ಶಿವಕುಮಾರ್ ಹೇಳಿದ್ದೇನು?

- ಕುಮಾರಣ್ಣ ಯಾವ ರೇಟು, ಎಂತಹ ರೇಟು? ರೇಟ್ ಫಿಕ್ಸ್ ಮಾಡುವ ಚಾಳಿ ನಿನಗೆ ಇರಬೇಕು.
- ಅವನಿಗೆ ಪಿಕ್ ಪಾಕೆಟ್ ಮಾಡಿ ರೂಡಿ ಅಲ್ಲವೇ? ಹೆದರಿಸಿ, ಬೆದರಿಸಿ ಬ್ಲಾಕ್ ಮೇಲ್ ಮಾಡುವುದು ಅವನ ಕೆಲಸ
- ಹೆದರಿಕೊಂಡು ಪಕ್ಕದ ಜಿಲ್ಲೆಗೆ ಹೋಗಿರುವ ಮಿಸ್ಟರ್ ಕುಮಾರಸ್ವಾಮಿ, ನೀನು ಯಾವುದೇ ಕಾರಣಕ್ಕೂ ಚುನಾವಣೆಯಲ್ಲಿ ಗೆಲ್ಲಲ್ಲ.
- ಮುಂದಿನ ಜನಾಂಗ ನೀವು ಎಂತ ಸುಳ್ಳುಗಾರ ಎಂದು ನೋಡಬೇಕು.ಆಸ್ತಿ ಬಗ್ಗೆ ಸದನದಲ್ಲಿ ಚರ್ಚಿಸಲು ನಾನು ಆಹ್ವಾನ ನೀಡಿದ್ದೆ. ಆತ ಸದನಕ್ಕೇ ಬರಲಿಲ್ಲ.
- ನಾನು ಕಲ್ಲು ಹೊಡೆದಿದ್ದೇನೆಯೇ, ಲೂಟಿ ಮಾಡಿದ್ದೇನೆಯೇ ಎಂಬುದು ಸದನದಲ್ಲಿ ತೀರ್ಮಾನವಾಗಲಿ.



### ಕುಮಾರಸ್ವಾಮಿ ಹೇಳಿದ್ದೇನು?

- ನನ್ನ ಹೇಳಿಕೆಯಿಂದ ತಾಯಂದಿರಿಗೆ ನೋವಾಗಿದ್ದರೆ ವಿಷಾದಿಸುವೆ. ಡಿಕೆಶಿ ನೀನೇನು ಅಳಬೇಡಪ್ಪ
- ನಾನೇನು ಅವರಂತೆ ಕೆನ್ನೆ ನೆಕ್ಕೋದು, ಹೆಣ್ಣು ಮಕ್ಕಳಿಗೆ ರೇಟ್ ಫಿಕ್ಸ್ ಮಾಡಿದ ರೀತಿ ಮಾತಾಡಿಲ್ಲ.
- ಹೆಣ್ಣು ಮಕ್ಕಳನ್ನು ಕಿಡ್ನಾಪ್ ಮಾಡಿ ಅವರ ಪೋಷಕರಿಂದ ಜಮೀನು ಬರೆಸಿಕೊಂಡಾಗ ದುಃಖವಾಗಲಿಲ್ಲವೇ?
- ಮಿಸ್ಟರ್ ಶಿವಕುಮಾರ್, ನಿಮ್ಮ ಪಕ್ಷದ ಉಸ್ತುವಾರಿ ಇದ್ದಾರಲ್ಲ, ಆ ಮನುಷ್ಯ ನಟಿ ಹೇಮಮಾಲಿನಿ, ಕಂಗನಾ ರಾವತ್ ಬಗ್ಗೆ ಹೇಳಿದಾಗ ತಿಳಿಯಲಿಲ್ಲವೇ?
- ಕಾಂಗ್ರೆಸ್‌ನ 5 ಗ್ಯಾರಂಟಿಗಳು ಪಿಕ್‌ಪಾಕೆಟ್ ಗ್ಯಾರಂಟಿ
- ಡಿ.ಕೆ.ಶಿವಕುಮಾರ್ ಅಪಾರ್ಟ್‌ಮೆಂಟ್ ನಿವಾಸಿಗಳನ್ನು ಬ್ಲಾಕ್ ಮೇಲ್ ಮಾಡುತ್ತಿದ್ದಾರೆ.

### ಲೋಕಸಭೆ ಸಮರದಲ್ಲಿ ಅಕ್ರಮಗಳ ಆಟ | ಮಾ.1ರಿಂದ ಏ.13ರವರೆಗೆ 4650 ಕೋಟಿ ರು. ಪತ್ತೆ ಮಾದಕ ದ್ರವ್ಯಗಳ ಪಾಲೇ 2 ಸಾವಿರ ಕೋಟಿ | 75 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲು

# ಲೋಕ ಕಣಕ್ಕೆ ಮಾದಕ ಜಾಲ

**ದೆಹಲಿ:** ಪ್ರಸಕ್ತ ಲೋಕಸಭೆ ಚುನಾವಣೆ ಮೇಲೆ ಮಾದಕ ದ್ರವ್ಯದ ಪ್ರಭಾವ ಹೆಚ್ಚಾಗಿದ್ದು, ಇಲ್ಲಿವರೆಗೆ 2 ಸಾವಿರ ಕೋಟಿ ರು.ಗಿಂತಲೂ ಹೆಚ್ಚು ಮೌಲ್ಯದ ಡ್ರಗ್ಸ್ ವಶ ಪಡಿಸಿಕೊಳ್ಳಲಾಗಿದೆ ಎಂದು ಕೇಂದ್ರ ಚುನಾವಣಾ ಆಯೋಗ ಆಘಾತಕಾರಿ ಮಾಹಿತಿ ನೀಡಿದೆ. ಸ್ವಾತಂತ್ರ್ಯ ನಂತರ ಇದೇ ಮೊದಲ ಬಾರಿಗೆ ಈ ಪ್ರಮಾಣದ ಅಕ್ರಮ ವಸ್ತುಗಳು ಪತ್ತೆಯಾಗಿವೆ ಎಂದೂ ಹೇಳಿದೆ.

ಮಾ.1ರಿಂದ ಏ.13ರ ವರೆಗೆ ಸುಮಾರು 4,650 ಕೋಟಿ ರು. ಮೌಲ್ಯದ ಅಕ್ರಮ ಹಣ, ಮಾದಕ ದ್ರವ್ಯ, ಉಚಿತ ಕೊಡುಗೆಗಳು, ಮದ್ಯ ಸೇರಿದಂತೆ ವಿವಿಧ ರೀತಿಯ ವಸ್ತುಗಳನ್ನು ಆಯೋಗ ವಶಪಡಿಸಿ ಕೊಂಡಿದೆ. ವಿಚಿತ್ರ ವೆಂದರೆ, 2019ರ ಚುನಾವಣೆ ವೇಳೆ ಪತ್ತೆಯಾದ ಒಟ್ಟಾರೆ ಅಕ್ರಮಕ್ಕಿಂತಲೂ ಇದು ಹೆಚ್ಚಾಗಿದೆ. ಆಗ 3,475 ಕೋಟಿ ರು. ಮೌಲ್ಯದ ಅಕ್ರಮ ಪತ್ತೆಯಾ ಗಿತ್ತು. ಹಾಗೆಯೇ, ಮಾ.1ರಿಂದ ಪ್ರತಿದಿನವೂ ಸುಮಾರು 100 ಕೋಟಿ ರು. ಮೌಲ್ಯದ ಅಕ್ರಮ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.

**ಮಾದಕ ದ್ರವ್ಯದ ಬಳಕೆ**

ಈಗ ಪತ್ತೆಯಾಗಿರುವ ಒಟ್ಟಾರೆ ಅಕ್ರಮದಲ್ಲಿ ಶೇ.45ರಷ್ಟು ಮಾದಕ ದ್ರವ್ಯವೇ ಇದೆ. ಮತದಾರರನ್ನು, ಅದರಲ್ಲೂ ಯುವಕರನ್ನು ಸೆಳೆಯುವ ಸಲುವಾಗಿ ಮಾದಕ ದ್ರವ್ಯಗಳನ್ನು ಆಮಿಷ ರೂಪದಲ್ಲಿ ನೀಡಲಾಗುತ್ತಿದೆಯೇ ಎಂಬ ಅನುಮಾನವೂ ವ್ಯಕ್ತವಾಗಿದೆ. ಇದು ಚುನಾವಣಾ ಋತು ಆರಂಭವಾಗುವ ಮುನ್ನವೂ ಹೆಚ್ಚಾಗಿತ್ತು. ಜನವರಿ-ಫೆಬ್ರವರಿಯಲ್ಲಿ ಪತ್ತೆಯಾದ ಅಕ್ರಮ ವಸ್ತುಗಳಲ್ಲಿ ಮಾದಕ ದ್ರವ್ಯದ ಪಾಲೇ ಶೇ.75ರಷ್ಟಿತ್ತು ಎಂದು ಆಯೋಗ ತಿಳಿಸಿದೆ. ಈ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಆಯೋಗ, ಮಾದಕ ದ್ರವ್ಯಗಳ

**ಪ್ರಮುಖಾಂಶಗಳು**

- ಪ್ರತಿ ದಿನವೂ 100 ಕೋಟಿ ರು. ಮೌಲ್ಯದ ಅಕ್ರಮಗಳ ಪತ್ತೆ
- ಅಕ್ರಮಗಳ ಪತ್ತೆಗೆ ತಂತ್ರಜ್ಞಾನದ ಸಹಾಯ ಪಡೆದ ಆಯೋಗ
- ಜನವರಿ-ಫೆಬ್ರವರಿಯಲ್ಲೂ 7500 ಕೋಟಿ ಮೌಲ್ಯದ ವಸ್ತು ವಶ
- ಒಟ್ಟಾರೆಯಾಗಿ 12 ಸಾವಿರ ಕೋಟಿ ಮೌಲ್ಯದ ಅಕ್ರಮ ಪತ್ತೆ

**ಅಕ್ರಮ ವಸ್ತು, ನಗದು** (ಕೋಟಿಗಳಲ್ಲಿ)

| | 2019 | 2024 |
|---|---|---|
| ಹಣ | 844 | 395 |
| ಮದ್ಯ | 304 | 489 |
| ಮಾದಕ ವಸ್ತು | 1279 | 2068 |
| ಬೆಲೆಬಾಳುವ ವಸ್ತು | 987 | 562 |
| ಉಚಿತ ಕೊಡುಗೆ | 1142 | 60 |

**ಕರ್ನಾಟಕ ಅಕ್ರಮ**

- ಹಣ - ₹35.53 ಕೋಟಿ
- ಮದ್ಯ - 1.30 ಕೋಟಿ ಲೀ.
- ಮದ್ಯದ ಮೌಲ್ಯ - ₹124 ಕೋಟಿ
- ಮಾದಕ ವಸ್ತು - ₹18 ಕೋಟಿ
- ಆಭರಣ - ₹41 ಕೋಟಿ
- ಉಚಿತ ಕೊಡುಗೆ - ₹60 ಕೋಟಿ
- ಒಟ್ಟಾರೆ - ₹281 ಕೋಟಿ

### ಚುನಾವಣೆಗೆ ಮುನ್ನವೇ 7,502 ಕೋಟಿ ವಶ

ಕೇಂದ್ರ ಚುನಾವಣಾ ಆಯೋಗವೂ ಜನವರಿ ಆರಂಭದಿಂದಲೇ ಅಕ್ರಮಗಳ ಮೇಲೆ ಕಣ್ಣಿಟ್ಟಿತ್ತು. ಹೀಗಾಗಿ, ಜನವರಿ ಮತ್ತು ಫೆಬ್ರವರಿಯಲ್ಲೇ 7,502 ಕೋಟಿ ಮೌಲ್ಯದ ಅಕ್ರಮ ವಸ್ತುಗಳು, ಹಣ, ಉಚಿತ ಕೊಡುಗೆಗಳು, ಆಭರಣಗಳು, ಮದ್ಯವನ್ನು ವಶಪಡಿಸಿಕೊಂಡಿದೆ. ಇದರಲ್ಲಿ ಮಾದಕ ದ್ರವ್ಯದ ಮೌಲ್ಯವೇ ಹೆಚ್ಚಾಗಿದೆ. ಚುನಾವಣಾ ಪೂರ್ವ ಮತ್ತು ಈಗ ಪತ್ತೆಯಾಗಿದ್ದು ಸೇರಿದರೆ ಒಟ್ಟಾರೆಯಾಗಿ 12 ಸಾವಿರ ಕೋಟಿ ರು. ಮೌಲ್ಯದ ಅಕ್ರಮ ಪತ್ತೆಯಾಗಿದೆ ಎಂದು ಹೇಳಿದೆ. ಅಲ್ಲದೆ, ಇನ್ನೂ ಆರು ವಾರಗಳ ಕಾಲ ಚುನಾವಣೆ ನಡೆಯಲಿದ್ದು, ಈ ಅಕ್ರಮದ ಮೌಲ್ಯ ಇನ್ನಷ್ಟು ಹೆಚ್ಚುವ ಸಾಧ್ಯತೆ ಇದೆ ಎಂಬ ಮಾತುಗಳು ಕೇಳಿಬಂದಿವೆ.

**ಉಚಿತ ಕೊಡುಗೆಗಳಿಗೆ 2ನೇ ಸ್ಥಾನ**

ಇನ್ನು ಮಾದಕ ದ್ರವ್ಯ ಬಿಟ್ಟರೆ ಅಕ್ರಮದಲ್ಲಿ ಉಚಿತ ಕೊಡುಗೆಗಳದ್ದು ಎರಡನೇ ಸ್ಥಾನ. ಸುಮಾರು 1,142 ಕೋಟಿ ರು. ಮೌಲ್ಯದ ಉಚಿತ ಕೊಡುಗೆಗಳು ಹಾಗೂ ಇತರೆ ವಸ್ತುಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಇನ್ನು 490 ಕೋಟಿ ರು. ಮೌಲ್ಯದ ಅಕ್ರಮ ಮದ್ಯವನ್ನೂ ವಶಕ್ಕೆ ತೆಗೆದುಕೊಳ್ಳಲಾಗಿದೆ. 395 ಕೋಟಿ ನಗದು ಮತ್ತು 562 ಕೋಟಿ ರು. ಮೌಲ್ಯದ ಅಮೂಲ್ಯ ವಸ್ತುಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ.

### ಜೋಷಿ, ಶೆಟ್ಟರ್, ಬೊಮ್ಮಾಯಿ, ಮೃಣಾಲ್, ಗೀತಾ ಪ್ರಮುಖರು

# 47 ಅಭ್ಯರ್ಥಿಗಳಿಂದ ನಾಮಪತ್ರ



**ಬೆಂಗಳೂರು:** ಲೋಕಸಭೆಗೆ ರಾಜ್ಯದಲ್ಲಿ ಎರಡನೇ ಹಂತದಲ್ಲಿ ನಡೆಯಲಿರುವ ಚುನಾವಣೆಗೆ ನಾಮಪತ್ರ ಸಲ್ಲಿಕೆ ಕಾರ್ಯ ಸೋಮವಾರ ಚುರುಕು ಪಡೆದಿದ್ದು, ಘಟಾನುಘಟಿಗಳು ಸೇರಿದಂತೆ ಒಟ್ಟು 47 ಅಭ್ಯರ್ಥಿಗಳು 69 ನಾಮಪತ್ರ ಸಲ್ಲಿಸಿದ್ದಾರೆ.

ಇದರೊಂದಿಗೆ ಈವರೆಗೆ ಒಟ್ಟು 88 ಅಭ್ಯರ್ಥಿಗಳು 126 ನಾಮಪತ್ರಗಳನ್ನು ಸಲ್ಲಿಸಿದಂತಾಗಿದೆ. ಶುಕ್ರವಾರ ನಾಮಪತ್ರ ಸಲ್ಲಿಸಲು ಕಡೆಯ ದಿನ. ಸೋಮವಾರ 45 ಪುರುಷರು 59 ಮತ್ತು 7 ಮಹಿಳೆಯರು 10 ನಾಮಪತ್ರಗಳನ್ನು ಸಲ್ಲಿಸಿದ್ದಾರೆ.

ಸೋಮವಾರ ಧಾರವಾಡದಿಂದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ (ಬಿಜೆಪಿ), ಬೀದರ್‌ನಿಂದ ಕೇಂದ್ರ ಸಚಿವ ಭಗವಂತ ಖೂಬಾ (ಬಿಜೆಪಿ) ಬೆಳಗಾವಿಯಿಂದ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ (ಬಿಜೆಪಿ), ಮೃಣಾಲ್ ಹೆಬ್ಬಾಳ್ಕರ್ (ಕಾಂಗ್ರೆಸ್), ಹಾವೇರಿಯಿಂದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ (ಬಿಜೆಪಿ), ಜಿ.ಜಿ.ಆನಂದಸ್ವಾಮಿ ಗಡ್ಡದೇವರಮಠ (ಕಾಂಗ್ರೆಸ್), ಶಿವಮೊಗ್ಗದಿಂದ ಗೀತಾ ಶಿವರಾಜ್‌ಕುಮಾರ್ (ಕಾಂಗ್ರೆಸ್) ಸೇರಿದಂತೆ ಪ್ರಮುಖರು ನಾಮಪತ್ರ ಸಲ್ಲಿಸಿದ್ದಾರೆ. → 8

### ಕಪ್ಪುಹಣದ ಯುಗ ಮತ್ತೆ ಬರಲಿದೆ

# ಚುನಾವಣಾ ಬಾಂಡ್‌ಗಳ ನಿಷೇಧದಿಂದ ಪಶ್ಚಾತ್ತಾಪ



**ದೆಹಲಿ:** ಚುನಾವಣಾ ಬಾಂಡ್ ರದ್ದು ಮತ್ತು ಪ್ರತಿಪಕ್ಷಗಳ ಆರೋಪದ ಮಧ್ಯೆಯೇ, ಈ ಯೋಜನೆಯನ್ನು ಬಲವಾಗಿ ಸಮರ್ಥಿಸಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ರದ್ದತಿ ಕ್ರಮದಿಂದಾಗಿ ಮುಂದೆ ಎಲ್ಲರೂ ಪಶ್ಚಾತ್ತಾಪ ಪಡಲಿದ್ದಾರೆ ಎಂದು ಹೇಳಿದ್ದಾರೆ.

ಎಎನ್‌ಐಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ದೇಶವನ್ನು ಮತ್ತೆ ಕಪ್ಪುಹಣದ ಕಡೆಗೆ ತಳ್ಳಿದಂತಾಗಿದೆ ಎಂದು ಹೇಳಿದ್ದಾರೆ. → 8

### ಮಾಜಿ ಆರೋಗ್ಯ ಸಚಿವರ ವಿರುದ್ಧ ಸ್ವಪಕ್ಷೀಯರಿಂದಲೇ ಕೆಂಡ ದಿನದಿಂದ ದಿನಕ್ಕೆ ರಕ್ಷಾ ರಾಮಯ್ಯ ಪರ ಜನಾಭಿಪ್ರಾಯ ಹೆಚ್ಚಳ

# ಸುಧಾಕರ್‌ಗೆ ಸ್ವಕ್ಷೇತ್ರದಲ್ಲೇ ವಿರೋಧ

ವಿಶ್ವವಾಣಿ ವಿಶೇಷ

**ಬೆಂಗಳೂರು:** ಸ್ವಪಕ್ಷೀಯರ ವಿರೋಧ, ಬಂಡಾಯ, ಅಸಮಾಧಾನವನ್ನು ಮೀರಿ ಚಿಕ್ಕಬಳ್ಳಾಪುರ ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿರುವ ಬಿಜೆಪಿ ಅಭ್ಯರ್ಥಿ, ಮಾಜಿ ಸಚಿವ ಡಾ.ಕೆ. ಸುಧಾಕರ್ ಅವರಿಗೆ ಮತದಾನ ಹತ್ತಿರವಾಗುತ್ತಿದ್ದಂತೆ 'ತಲೆಬಿಸಿ' ಕಡಿಮೆಯಾಗುವ ಬದಲು ಹೆಚ್ಚಾದಂತೆ ಕಾಣುತ್ತಿದೆ.



ವಿಧಾನಸಭಾ ಚುನಾವಣೆಯಲ್ಲಿ ಹೀನಾಯ ಸೋಲಿನ ಕಹಿಯನ್ನು ಮರೆತು ಸ್ಪರ್ಧಿಸಿರುವ ಸುಧಾಕರ್ ಅವರು ಸ್ವಕ್ಷೇತ್ರದಲ್ಲಿಯೇ ಬೆಂಬಲ ಸಿಗುತ್ತಿಲ್ಲ ಎನ್ನುವ ಮಾತುಗಳು ಕೇಳಿಬರುತ್ತಿದೆ. ಹುಟ್ಟಿದ ಊರು ಹಾಗೂ ಕ್ಷೇತ್ರದಲ್ಲಿಯೇ ಸುಧಾಕರ್ ಅವರಿಗೆ ಪರೋಕ್ಷವಾಗಿ ಜನರು 'ಗೋಬ್ಯಾಕ್' ಎನ್ನುವ ಮಾತನ್ನು ಹೇಳುತ್ತಿರುವುದು ಇದೀಗ ಭಾರಿ ಆತಂಕಕ್ಕೆ ಕಾರಣವಾಗಿದೆ.

ಒಕ್ಕಲಿಗ ಸಮುದಾಯದ ಬೆಂಬಲದೊಂದಿಗೆ ಗೆಲ್ಲುವ 'ಅತಿ'ವಿಶ್ವಾಸದಲ್ಲಿದ್ದ ಸುಧಾಕರ್ ಅವರಿಗೆ ಇದೀಗ ಪಕ್ಷದ ಕಾರ್ಯಕರ್ತರೇ ದೂರವಾಗುತ್ತಿದ್ದಾರೆ. ಸಚಿವರಾಗಿದ್ದ ಸಮಯದಲ್ಲಿ ಅವರು ಮಾಡಿದ್ದ ಹಲವು ಭ್ರಷ್ಟಾಚಾರ, ಕಾರ್ಯಕರ್ತರೊಂದಿಗೆ ಅಂತರ ಕಾಯ್ದುಕೊಂಡಿದ್ದು ಈವರೆಗೆ ಸ್ಥಳೀಯರು ಮರೆತಿಲ್ಲ. ಮೋದಿ ಹೆಸರಲ್ಲಿ ಮತ ಹಾಕಿದರೂ, ಅದು ಸುಧಾಕರ್ ಅವರಿಗೆ ಹೋಗುತ್ತದೆ. ಸಂಸದರಾದರೆ ಪುನಃ ಹಳೇ ಚಾಳಿಯನ್ನೇ ಮುಂದು ವರೆಸುವ ಸಾಧ್ಯತೆಯಿದೆ. → 8

### ಸುಧಾಕರ್‌ಗೆ ಒಕ್ಕಲಿಗ ವಿರೋಧದ ಬಿಸಿ

ಈ ನಡುವೆ ಮಾಜಿ ಸಚಿವ ಡಾ.ಕೆ.ಸುಧಾಕರ್ ಅವರ ಒಕ್ಕಲಿಗ ಪ್ರೀತಿಯ ಬಗ್ಗೆ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ನಿಷ್ಠಾವಂತ ಜೆಡಿಎಸ್ ಕಾರ್ಯಕರ್ತನೊಬ್ಬ ಅಳಲು ತೋಡಿಕೊಂಡಿರುವುದು ಇದೀಗ ಮತ್ತೊಂದು ಸಮಸ್ಯೆಗೆ ಕಾರಣವಾಗಿದೆ. ಚುನಾವಣೆ ಬಂದ ತಕ್ಷಣ ಡಾ.ಕೆ.ಸುಧಾಕರ್‌ಗೆ ಒಕ್ಕಲಿಗ ಜಾತಿ ಪ್ರೇಮ ಜಾಗೃತವಾಗುತ್ತದೆ. ಅಧಿಕಾರಕ್ಕೇರಿದ ಮೇಲೆ ವಿರೋಧವಾಗಿ ಬದಲಾಗುತ್ತದೆ ಎನವ್ನುವ ಅರ್ಥದಲ್ಲಿ ಹೇಳಿಕೆ ಇದೀಗ ಸುಧಾಕರ್ ಅವರಿಗೆ ಸಮಸ್ಯೆಯನ್ನು ಹೆಚ್ಚಿಸಿದೆ. 'ನನ್ನ ಪ್ರೀತಿಯ ಒಕ್ಕಲಿಗ ಮತಬಾಂಧವರೇ ಈ ನಮ್ಮ ಮಾಜಿ ಸಚಿವ ಸುಧಾಕರ್ ನಮ್ಮ ಒಕ್ಕಲಿಗ ವಿರೋಧಿ! ಚುನಾವಣೆ ಬಂದಾಗ ಈಗ ಒಕ್ಕಲಿಗರು ಜ್ಞಾಪಕಕ್ಕೆ ಬಂದರೇನು? ಯಾವ ಒಕ್ಕಲಿಗ ವಿದ್ಯಾರ್ಥಿಗಳಿಗೆ ಇವರು ಸಹಾಯ ಮಾಡಿದ್ದಾರೆ! ಮಂಚೇನಹಳ್ಳಿ ಪ್ರಕಾಶ್ ಅಣ್ಣನ ಮೇಲೆ ಸುಳ್ಳು ಕೇಸು ಹಾಕಿಸಿ ಜೈಲಿಗೆ ಕಳಿಸಿದರು. ಆಗ ಒಕ್ಕಲಿಗ ಪ್ರೀತಿ ಎಲ್ಲಿ ಹೋಗಿತ್ತು? ಎಂದು ಪ್ರಶ್ನಿಸಿದ್ದಾರೆ. ಈ ಹೇಳಿಕೆ ಹೊರಬಂದ ಬಳಿಕ ಒಕ್ಕಲಿಗರು ಸುಧಾಕರ್ ವಿರುದ್ಧ ನಿಂತಿದ್ದಾರೆ ಎನ್ನಲಾಗುತ್ತಿದೆ.

### ಇರಾನ್-ಇಸ್ರೇಲ್ ನಡುವೆ ಯುದ್ಧ

# ಸಮರ ಭೀತಿಗೆ ಕುಸಿದ ಮುಂಬಯಿ ಷೇರುಪೇಟೆ

**ದೆಹಲಿ:** ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧ ಭೀತಿಯ ನಡುವೆಯೇ, ಮುಂಬಯಿ ಷೇರುಪೇಟೆ ತೀವ್ರ ಕುಸಿತಕಂಡಿದೆ.

ಮಧ್ಯಪ್ರಾಚ್ಯದಲ್ಲಿ ದಿನದಿಂದ ದಿನಕ್ಕೆ ಸಂಘರ್ಷಮಯ ವಾತಾವರಣ ಹೆಚ್ಚಾಗುತ್ತಲೇ ಇದ್ದು, ಇದು ಹೂಡಿಕೆದಾರರಲ್ಲಿ ಆತಂಕ ಸೃಷ್ಟಿಸಿದೆ. ಹೀಗಾಗಿ, ಸೆನ್ಸೆಕ್ಸ್ 800 ಅಂಕ ಮತ್ತು ನಿಫ್ಟಿ 400 ಅಂಕಗಳಷ್ಟು ಕುಸಿತವಾಗಿದೆ. ಈ ಮಧ್ಯೆ, ಇರಾನ್ ವಶದಲ್ಲಿರುವ ಹಡಗಿನಲ್ಲಿ 17 ಭಾರತೀಯರ ಭೇಟಿಗೆ ಅವಕಾಶ ನೀಡುವುದಾಗಿ ಇರಾನ್ ಹೇಳಿದೆ. ವಿದೇಶಾಂಗ ಸಚಿವ ಎಸ್.ಜೈಶಂಕರ್, ಇರಾನ್‌ನ ವಿದೇಶಾಂಗ ಸಚಿವರ ಜತೆಗೆ ಮಾತುಕತೆ ನಡೆಸಿದ್ದಾರೆ.

### ರೈತರಿಗೆ ಹವಾಮಾನ ಇಲಾಖೆ ಸಿಹಿ ಸುದ್ದಿ | ದೇಶದೆಲ್ಲೆಡೆ ಉತ್ತಮ ಮುಂಗಾರು

# ವಾಡಿಕೆಗಿಂತ ಅಧಿಕ ಮಳೆ ಸಾಧ್ಯತೆ

**ದೆಹಲಿ:** ಬರದಿಂದ ಬೇಸತ್ತಿರುವ ಕರ್ನಾಟಕ ಸೇರಿದಂತೆ ದೇಶದ ಎಲ್ಲ ರೈತರಿಗೆ ಭಾರತೀಯ ಹವಾಮಾನ ಇಲಾಖೆ ಸಂತಸದ ಸುದ್ದಿ ನೀಡಿದ್ದು, ಈ ಬಾರಿ ವಾಡಿಕೆಗಿಂತ ಅಧಿಕ ಮಳೆಯಾಗಲಿದೆ ಎಂದಿದೆ. ಅಂದರೆ, ದೀರ್ಘಾವಧಿ ಅಂದಾಜು ಪ್ರಕಾರ ಶೇ.106ರಷ್ಟು ಮಳೆಯಾಗಲಿದೆ ಎಂದಿದೆ.

ಸೋಮವಾರ ಪತ್ರಿಕಾಗೋಷ್ಠಿ ನಡೆಸಿದ ಐಎಂಡಿ ಮಹಾ ನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಮತ್ತು ಕೇಂದ್ರ ಭೂವಿಜ್ಞಾನಗಳ ಇಲಾಖೆ ಕಾರ್ಯದರ್ಶಿ ಎಂ. ರವೀಚಂದ್ರನ್ ಅವರು, ಲಾ ನಿನಾ ಪ್ರಭಾವದಿಂದಾಗಿ ಉತ್ತಮ ಮಳೆಯಾಗಲಿದೆ ಎಂದರು. → 8

**ರಾಜ್ಯದಲ್ಲೂ ಅಧಿಕ**

ರಾಜ್ಯ ಹವಾಮಾನ ಇಲಾಖೆಯೂ ಮುಂಗಾರು ವಿಚಾರದಲ್ಲಿ ಮಾಹಿತಿ ನೀಡಿದ್ದು, ಈ ಬಾರಿ ವಾಡಿಕೆಗಿಂತ ಹೆಚ್ಚೇ ಮಳೆಯಾಗಲಿದೆ ಎಂದಿದೆ. ಅಂದರೆ ಮುಂಗಾರು(ಜೂನ್ -ಸೆಪ್ಟೆಂಬರ್)ಅವಧಿಯಲ್ಲಿ 85.2 ಸೆಂ.ಮೀ.ನಷ್ಟು ಮಳೆಯಾಗಲಿದೆ ಎಂದಿದೆ. ಅಂದರೆ, ಜೂನ್‌ನಲ್ಲಿ 19.9 ಸೆಂ.ಮೀ., ಜುಲೈನಲ್ಲಿ 27.1 ಸೆಂ.ಮೀ., ಆಗಸ್ಟ್‌ನಲ್ಲಿ 22 ಸೆಂ.ಮೀ ಹಾಗೂ ಸೆಪ್ಟೆಂಬರ್‌ನಲ್ಲಿ 16.1 ಸೆಂ.ಮೀ. ಮಳೆ ಬೀಳಲಿದೆ.

### ಕೇಂದ್ರದಿಂದ ₹1.87 ಲಕ್ಷ ಕೋಟಿ ಬಾಕಿ | ರಾಜ್ಯದಲ್ಲಿ ಕಾಂಗ್ರೆಸ್ ಪರ ಅಲೆಯಿದೆ

# ರಾಜ್ಯಕ್ಕೆ ಕೊಡಬೇಕಿರುವ ಅನುದಾನ ಕೊಡಲಿ



- ಪಂಚಗ್ಯಾರಂಟಿ ಯೋಜನೆಗಳಿಂದ ಬಡವರ ಜೀವನ ಮಟ್ಟ ವೃದ್ಧಿಸಿದೆ
- ಈ ಬಾರಿ ಕನಿಷ್ಠ 20 ಸೀಟುಗಳನ್ನು ಕರ್ನಾಟಕದಲ್ಲಿ ಕಾಂಗ್ರೆಸ್ ಗೆಲ್ಲಲಿದೆ
- ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಖಜಾನೆ ದಿವಾಳಿಯಾಗಿಲ್ಲ
- ಬಿಜೆಪಿಯವರು ಬರೀ ಸುಳ್ಳು ಹೇಳಿಕೊಂಡೇ ಓಡಾಡುತ್ತಿದ್ದಾರೆ.

"ಬಿಜೆಪಿಯವರು ನಮ್ಮ ಗ್ಯಾರಂಟಿಗಳ ಬಗ್ಗೆ ಮಾತನಾಡುವ ಮೊದಲು ಏನು ಮಾಡಿದ್ದಾರೆ ಎನ್ನುವುದನ್ನು ಹೇಳಲಿ. ಪ್ರತಿಯೊಬ್ಬರ ಖಾತೆಗೆ 15 ಲಕ್ಷ ಹಾಕುವುದಾಗಿ ಹೇಳಿ ದಶಕ ಕಳೆದರೂ ಯಾರಿಗೂ ದುಡ್ಡು ಬಂದಿಲ್ಲವೇಕೆ?

- **ಸರೋವರ ಶ್ರೀನಿವಾಸ್**, ಅಧ್ಯಕ್ಷರು, ಕೆಎಸ್‌ಟಿಡಿಸಿ

ವಿಶ್ವವಾಣಿ ಸಂದರ್ಶನ

ರಂಜಿತ್ ಎಚ್. ಅಶ್ವತ್ಥ

ರಾಜ್ಯದ ಜನರಿಗೆ ವಿಧಾನಸಭಾ ಚುನಾವಣೆಯ ಪೂರ್ವದಲ್ಲಿ ಕೊಟ್ಟಿರುವ ಮಾತಿನಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪಂಚಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಆದರೆ ಕೇಂದ್ರದಿಂದ ಬರಬೇಕಿರುವ 1.87 ಲಕ್ಷ ಕೋಟಿ ರು. ಅನುದಾನ ಬಂದರೆ ರಾಜ್ಯದ ಅಭಿವೃದ್ಧಿಗೆ ಇನ್ನಷ್ಟು ವೇಗ ಸಿಗಲಿದೆ ಎಂದು ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಸರೋವರ ಶ್ರೀನಿವಾಸ್ ಅಭಿಪ್ರಾಯಪಟ್ಟಿದ್ದಾರೆ. 'ವಿಶ್ವವಾಣಿ'ಗೆ ನೀಡಿರುವ ವಿಶೇಷ ಸಂದರ್ಶನದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ, ಚುನಾವಣಾ ತಯಾರಿ, ಬಿಜೆಪಿಯ ಆರೋಪ, ಚಿಕ್ಕಮಗಳೂರು-ಉಡುಪಿ ಲೋಕಸಭಾ ಕ್ಷೇತ್ರದ ಚಿತ್ರಣದ ಬಗ್ಗೆ ಮಾತನಾಡಿದ್ದಾರೆ.

ಗ್ಯಾರಂಟಿ ಯೋಜನೆಗಳ ಬಗ್ಗೆ ಮಾತನಾಡುವ ಬಿಜೆಪಿಗರು ಕಳೆದ 10ವರ್ಷದಲ್ಲಿ ಯಾವ ಸಾಧನೆ ಮಾಡಿದ್ದಾರೆ? ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದ ಕಪ್ಪು ಹಣ ವಾಪಸು, ಪ್ರತಿವರ್ಷ ಎರಡು ಕೋಟಿ ಉದ್ಯೋಗ ಸೃಷ್ಟಿ ಸೇರಿದಂತೆ ಹಲವು ಘೋಷಣೆಗಳು ಯಾವ ಹಂತದಲ್ಲಿದೆ? ಅವರು ಕೊಟ್ಟಿದ್ದ ಯಾವ ಭರವಸೆಯನ್ನು ಈಡೇರಿಸದೇ ಇರುವ ಬಿಜೆಪಿಗರು ನಮ್ಮ ಗ್ಯಾರಂಟಿ ಯೋಜನೆಗಳ ಬಗ್ಗೆ ಮಾತನಾಡುವ ನೈತಿಕತೆಯನ್ನು ಹೊಂದಿಲ್ಲ. ಕಾಂಗ್ರೆಸ್ ಸರಕಾರ ಗ್ಯಾರಂಟಿ ಯೋಜನೆಗಳನ್ನು ಬೇರೆ ರಾಜ್ಯಗಳಲ್ಲಿ ಬಿಜೆಪಿಯವರು ಕದ್ದಿದ್ದಾರೆ ಎಂದು ಟೀಕಿಸಿದರು. → 8

### ಪಕ್ಷವನ್ನು ಕುಟುಂಬ ರಾಜಕಾರಣದಿಂದ ಹೊರತರುವ ಉದ್ದೇಶದಿಂದಲೇ ಬಂಡಾಯ

# ನನ್ನ ಸ್ಪರ್ಧೆ ಬಿಜೆಪಿ, ಆರ್‌ಎಸ್‌ಎಸ್‌ನ ಹಲವು ನಾಯಕರ ಅಭಿಪ್ರಾಯ



- ಪಕ್ಷ ಶುದ್ಧೀಕರಣದ ಬಗ್ಗೆ ಹಲವು ಬಾರಿ ಪ್ರಸ್ತಾಪಿಸಿದ್ದೇನೆ. ಈಗ ಬಹಿರಂಗವಾಗಿ ಹೇಳಿದ್ದೇನೆ
- ಯಡಿಯೂರಪ್ಪನವರಿಲ್ಲದಿದ್ದರೆ ರಾಜ್ಯದಲ್ಲಿ ಬಿಜೆಪಿ ಇರುತ್ತಿರಲಿಲ್ಲ ಎಂಬ ಭ್ರಮೆ ಏಕೆ?
- ಎಲ್ಲವೂ ಅವರ ಕುಟುಂಬಕ್ಕೆ ಕೊಟ್ಟರೇ ಪಕ್ಷಕ್ಕೆ ದುಡಿದವರು ಎಲ್ಲಿಗೆ ಹೋಗಬೇಕು?
- ಬಿಜೆಪಿಯಲ್ಲಿ ಕುಟುಂಬದ ಹಿಡಿತ ಆರಂಭವಾಗಿದೆ. ಕಾಂಗ್ರೆಸ್ ಬಗ್ಗೆ ಮಾತನಾಡುವ ಯಡಿಯೂರಪ್ಪ ಮಾಡುತ್ತಿರುವುದೇನು?
- ಕಾಂತೇಶ್‌ಗೆ ಟಿಕೆಟ್ ನೀಡಲು ಶಿಫಾರಸು ಮಾಡಿ, ಬಳಿಕ ಏಕೆ ಟಿಕೆಟ್ ಕೊಡಲಿಲ್ಲ?

ವಿಶ್ವವಾಣಿ ಸಂದರ್ಶನ

ಹೆಗ್ಗೆರೆ ರೇಣುಕಾರಾಧ್ಯ

ಯಡಿಯೂರಪ್ಪ ಹಾಗೂ ಅವರ ಪುತ್ರನ ವಿರುದ್ಧ ನಾನು ಸ್ಪರ್ಧಿಸಬೇಕು ಎನ್ನುವುದು ಕೇವಲ ನನ್ನೊಬ್ಬನ ಆಸೆಯಲ್ಲ. ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನ ಹಲವು ನಾಯಕರ ಅಭಿಪ್ರಾಯವಾಗಿದೆ. ಪಕ್ಷವನ್ನು ಕುಟುಂಬ ರಾಜಕಾರಣದ ಕಪಿಮುಷ್ಠಿಯಿಂದ ಹೊರತರಬೇಕು ಎನ್ನುವ ಏಕೈಕ ಕಾರಣಕ್ಕೆ ನಾನು ಬಂಡಾಯವಾಗಿ ಸ್ಪರ್ಧಿಸಿದ್ದೇನೆ ಎಂದು ಶಿವಮೊಗ್ಗ ಬಂಡಾಯ ಅಭ್ಯರ್ಥಿ ಕೆ.ಎಸ್.ಈಶ್ವರಪ್ಪ ಹೇಳಿದ್ದಾರೆ.

'ವಿಶ್ವವಾಣಿ'ಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಬಂಡಾಯ ಸ್ಪರ್ಧೆಗೆ ಕಾರಣ, ಕುಟುಂಬ ರಾಜಕಾರಣ, ಮೋದಿ ಫೋಟೋ ಬಳಕೆ, ಚುನಾವಣೆಗೆ ಸ್ಪರ್ಧಿಸುವ ಹಿಂದಿನ ಉದ್ದೇಶ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಸುದೀರ್ಘವಾಗಿ ಮಾತನಾಡಿದ್ದಾರೆ.

ಸಂದರ್ಶನದಲ್ಲಿ ಯಡಿಯೂರಪ್ಪ ಅವರ ಹಲವು ಕ್ರಮಗಳ ಬಗ್ಗೆ ವಾಗ್ದಾಳಿ ನಡೆಸಿರುವ ಅವರು, ಪಕ್ಷ ಒಂದು ಕುಟುಂಬಕ್ಕೆ ಸೀಮಿತವಾಗಿಲ್ಲ. ಸಾವಿರಾರು ಕಾರ್ಯಕರ್ತರು ಕಟ್ಟಿ ಬೆಳೆಸಿದ್ದಾರೆ. ಅವರ ತ್ಯಾಗದ ಪರಿಶ್ರಮಗಳಿಂದಲೇ ಪಕ್ಷ ಅಧಿಕಾರಕ್ಕೆ ಬಂದದ್ದು. ಅದನ್ನು ಮರೆತು ಪಕ್ಷವನ್ನೇ ಶಿಥಿಲ ಮಾಡಲು ಹೊರಟವರ ವಿರುದ್ಧ ನನ್ನ ಸ್ಪರ್ಧೆ ಎಂದು ವಾಗ್ದಾಳಿ ನಡೆಸಿದ್ದಾರೆ. → 8